# ಕರ್ನಾಟಕ ಪರೀಕ್ಷಾ ಪ್ರಾಧಿಕಾರ
# Karnataka Examinations Authority


ನಂ:ಇಡಿ/ಕೆಇಎ/ಯುಜಿಸಿಇಟಿ-2025 ದಿನಾಂಕ:14-05-2025

## ಸಿಇಟಿ-2025ರ ದಾಖಲಾತಿ ಪರಿಶೀಲನೆ – ವಿಸ್ತರಿಸಲಾಗಿದೆ

*ದಾಖಲೆಗಳ ಪರಿಶೀಲನೆ:*

ಪ್ರಕಟಿಸಿದ ವೇಳಾಪಟ್ಟಿಯಂತೆ ಯುಜಿಸಿಇಟಿ-2025 ರ ಅರ್ಜಿಯಲ್ಲಿ ಕ್ಲಾಸ್ ಕೋಡ್ **'b, c, d, e, f, g, h, i, j, k, l, m, n, o ಮತ್ತು z'** ಎಂದು ಕ್ಲೇಮ್ ಮಾಡಿರುವ ಅಭ್ಯರ್ಥಿಗಳಿಗೆ ಮೂಲ ದಾಖಲೆಗಳ ಪರಿಶೀಲನೆಯನ್ನು 05-05-2025 ರಿಂದ 15-05-2025ರ ವರೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಕ್ರಾಸ್, ಮಲ್ಲೇಶ್ವರಂ, ಸಂಪಿಗೆ ರಸ್ತೆ, ಬೆಂಗಳೂರು-560 012 ಇಲ್ಲಿ ನಡೆಸಲಾಗುತ್ತಿದೆ. *(ಸ್ವೈ ಅರ್ಹತಾ ಕಂಡಿಕೆಯವರು ದಾಖಲೆಗಳ ಪರಿಶೀಲನೆಗೆ ಹಾಜರಾಗುವಂತಿಲ್ಲ.)*

ಆದರೆ ಅನಿವಾರ್ಯ ಕಾರಣಗಳಿಂದ ಮೇಲ್ಕಂಡ ದಿನಾಂಕಗಳಂದು ದಾಖಲೆಗಳ ಪರಿಶೀಲನೆಗೆ ಹಾಜರಾಗದಿರುವ ಅಭ್ಯರ್ಥಿಗಳು 16-05-2025 ರಿಂದ 20-05-2025 ರ ವರೆಗೆ ಪ್ರಾಧಿಕಾರದ ವೆಬ್ ಸೈಟಿನಲ್ಲಿ ನೀಡಿರುವ ಲಿಂಕ್ ನಲ್ಲಿ Slot Book ಮಾಡಿಕೊಂಡು ಅಗತ್ಯ ವಿರುವ ಎಲ್ಲಾ ಮೂಲ ದಾಖಲೆಗಳೊಂದಿಗೆ ದಾಖಲೆಗಳ ಪರಿಶೀಲನೆಗೆ ಖುದ್ದಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಹಾಜರಾಗಬಹುದಾಗಿದೆ.

ಈಗಾಗಲೇ ದಾಖಲೆಗಳ ಪರಿಶೀಲನೆಗೆ ಹಾಜರಾಗಿ ಅಗತ್ಯ ದಾಖಲೆಗಳನ್ನು ಸಲ್ಲಿಸದೇ ಇದ್ದ ಕಾರಣದಿಂದ ಪರಿಶೀಲನೆಯನ್ನು ಪೂರ್ಣಗೊಳಿಸಿಕೊಳ್ಳದೇ ಇರುವವರೂ ಸಹ ಅಗತ್ಯ ದಾಖಲೆಗಳನ್ನು ಸಲ್ಲಿಸಿ ವಿಸ್ತರಿಸಿದ ದಿನಾಂಕಗಳಂದು ದಾಖಲೆಗಳ ಪರಿಶೀಲನೆಯನ್ನು ಮಾಡಿಕೊಳ್ಳಬಹುದಾಗಿದೆ.

ದಾಖಲೆಗಳ ಪರಿಶೀಲನೆಗೆ ಅರ್ಹತಾ ಕಂಡಿಕೆವಾರು ಸಲ್ಲಿಸಬೇಕಾದ ದಾಖಲೆಗಳ ವಿವರಗಳನ್ನು ಪ್ರಾಧಿಕಾರದ ವೆಬ್ ಸೈಟಿನಲ್ಲಿ ಪ್ರಕಟಿಸಿರುವ ಮಾಹಿತಿ ಪುಸ್ತಕವನ್ನು ನೋಡಬಹುದು.

**ವಿಶೇಷ ಕ್ಯಾಟಗರಿಗಳ ಪ್ರಮಾಣಪತ್ರಗಳನ್ನು ಸಲ್ಲಿಸುವ ಬಗ್ಗೆ**

ಸಿಇಟಿ-2025 ರ ಅರ್ಜಿಯಲ್ಲಿ Defence / Ex-Defence / CAPF / CRPF / CISF / BSF / ITBP / Ex-CAPF / Scouts & Guides / Anglo Indian / NCC ಕ್ಲೇಮ್ ಮಾಡಿರುವ ಆದರೆ ಪ್ರಮಾಣ ಪತ್ರಗಳನ್ನು ನಿಗದಿತ ದಿನಾಂಕಗಳಂದು ಸಲ್ಲಿಸದೇ ಇದ್ದಲ್ಲಿ 16-05-2025 ರಿಂದ 20-05-2025 ರ ವರೆಗೆ ಆಯಾ ವಿಶೇಷ ಕ್ಯಾಟಗರಿಗಳ ಪ್ರಮಾಣ ಪತ್ರಗಳನ್ನು ಖುದ್ದಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇಲ್ಲಿ ಸಲ್ಲಿಸಲು ಸೂಚಿಸಲಾಗಿದೆ

**12ನೇ ತರಗತಿಯ ಅಂಕಗಳನ್ನು ನಮೂದಿಸುವ ಬಗ್ಗೆ**

12ನೇ ತರಗತಿಯ ಅಂಕಗಳನ್ನು ನಿಗದಿತ ಲಿಂಕ್ ನಲ್ಲಿ ನಮೂದಿಸುವ ಕುರಿತು ವಿವರವಾದ ಪ್ರಕಟಣೆಯನ್ನು ಪ್ರಾಧಿಕಾರದ ವೆಬ್ ಸೈಟಿನಲ್ಲಿ ಪ್ರಕಟಿಸಲಾಗಿರುತ್ತದೆ, ಅಭ್ಯರ್ಥಿಗಳು ಓದಿಕೊಂಡು ಅದರಂತೆ ಕ್ರಮವಹಿಸಲು ಸೂಚಿಸಿದೆ.

ಕಾರ್ಯನಿರ್ವಾಹಕ ನಿರ್ದೇಶಕರು


**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**

18th Cross, Sampige Road, Malleshwaram, Bengaluru - 560 012.

Phone: 080 - 23 564 583 Helpline : 080 - 23 460 460.

e-mail : keauthority-ka@nic.in Website : http://kea.kar.nic.in